ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ
*ಪ್ರಯತ್ನವೇ ಇಲ್ಲದೆ ಸಿಗುವ ಫಲ ಯಾವುದು?*



ಪಕ್ಕದ ಕಾಂಪೌಂಡಿನಲ್ಲಿ ಬೆಳೆದು, ನಮ್ಮ ಕಾಂಪೌಂಡಿಗೆ ಬಾಗಿರುವ ಮರದಿಂದ ಬೀಳುವ ಹಣ್ಣು!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ತಾಯಿ ಕಳೆದುಕೊಂಡ ಗಂಡಿಗೂ, ಹೆಂಡತಿ ಕಳೆದುಕೊಂಡ ಗಂಡಿಗೂ ಏನು ವ್ಯತ್ಯಾಸ?*
ತಾಯಿ ಕಳೆದುಕೊಂಡವನು 'ನಾನು ತಬ್ಬಲಿ' ಎನ್ನುತ್ತಾನೆ; ಹೆಂಡತಿ ಕಳೆದುಕೊಂಡವನು 'ನಾನು ಯಾರನ್ನು ತಬ್ಬಲಿ' ಎನ್ನುತ್ತಾನೆ!

ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ
*ಎರಡು ಕೈಗಳು ಸೇರಿದರೆ ಚಪ್ಪಾಳೆ. ಎರಡು ಹೃದಯಗಳು ಸೇರಿದರೆ?*
ಪಾರ್ಕ್‌ನಲ್ಲಿರುವ ಎಲ್ಲಾ ಮರಗಳ ಸುತ್ತ ಅಪ್ಪಾಳೆ ತಿಪ್ಪಾಳೆ!

ಪಿ.ಎನ್.ಶ್ರೀವತ್ಸ, ಬೆಂಗಳೂರು
*ರಾಜೀನಾಮೆ; ಇದರ ನಿಜವಾದ ಅರ್ಥ?*
ಬೇಕಾದ ಖಾತೆಯನ್ನು ಪಡೆಯಲು ಭಿನ್ನಮತೀಯರು ಬರೆಯುವ ಭಯೋತ್ಪಾದಕ ಪತ್ರ!

ಲ್ಯಾಂಡ್‌ಬ್ಯಾಂಕ್ ಡಿ. ಚಂದ್ರಕುಮಾರ್, ಬೆಂಗಳೂರು
*ರೈತರು ಸೂಟ್ ಧರಿಸಿ, ಟೈ ಕಟ್ಟಿ, ಕಾರಲ್ಲಿ ಬರುವ ಕಾಲ ಬರಬಹುದೆ?*



ಈಗ ದೇವನಹಳ್ಳಿಯ ಸುತ್ತಮುತ್ತ ಜಮೀನು ಮಾರಿದ ರೈತರು ಬರುತ್ತಿರುವುದೇ ಹಾಗೆ!

ನರಸಿಂಹ ಎಂ. ಪೈ, ಹೊನ್ನಾವರ
*ಮದುವೆಗೆ ಮುಂಚೆ ದೇವಾಲಯ ಸುತ್ತುವ ಪ್ರೇಮಿಗಳು ಮದುವೆಯ ನಂತರ ನ್ಯಾಯಾಲಯ ಸುತ್ತುವುದೇಕೆ?*
ಸರಿಯೇ! ಆಶೀರ್ವಾದ ಪ್ರಮುಖವಾದಾಗ ದೇವಾಲಯ, ಒಡ್ಡು ವಾದ ಪ್ರಮುಖವಾದಾಗ ನ್ಯಾಯಾಲಯ!

ಆರಿಫ್, ದಾವಣಗೆರೆ
*ಹುಡುಗಿಯರ ಮನಸ್ಸಿನಲ್ಲಿ ನಾವು ಅಚ್ಚಳಿಯದಂತೆ ಉಳಿಯಬೇಕೆಂದರೆ ಏನು ಮಾಡಬೇಕು?*
ಅವರು ಕಪಾಳಮೋಕ್ಷ ಮಾಡಿದ ಮೊಟ್ಟಮೊದಲ ಹುಡುಗನೆಂಬ ಖ್ಯಾತಿಗೆ ಒಳಗಾಗಬೇಕು!

ಸುಧಾ ವಿ. ರಾವ್, ಸಿಕಂದ್ರಾಬಾದ್
*ಮಂತ್ರಿಗಳು ಕವಿಗಳೇ ಆಗಿರಬೇಕು ಅಥವಾ ಕವಿಗಳು ಮಾತ್ರ ಮಂತ್ರಿಗಳಾಗಬೇಕೆಂಬ ಕಾನೂನು ಹೊರಡಿಸಿದರೆ ದೇಶದ ಅವ್ಯವಸ್ಥೆ ಕಡಿಮೆಯಾಗಬಹುದೆ?*
ಈಗಲೂ ಅದೇ ಕಾನೂನೇ ಇದೆ; ಒಂದೇ ಅಕ್ಷರ ವ್ಯತ್ಯಾಸ ವಿ ಬದಲು ಪಿ!

ವಿದ್ಯಾಭೂಷಣ್, ಶಿವಮೊಗ್ಗ
*ಹುಟ್ಟಿನಿಂದ ಜೊತೆಯಲ್ಲೇ ಬರುವ ಕಾಮ ಕಾವಿ ಧರಿಸಿದಾಗ ಕರಗಿಹೋಗುತ್ತದೆಯೆ?*
ಮನಸ್ಸಿಗೆ ಹೊದೆಸುವಂತಹ ಕಾವಿ ದೊರೆತರೆ ಕರಗಬಹುದು!

ಅಶ್ಫಾಕ್ ಅಹ್ಮದ್ ಮ. ಹುಬ್ಬಳ್ಳಿ, ಗಂಜೀಗಟ್ಟ
*ಇಲ್ಲೊಬ್ಬ ಹುಡುಗಿ ನಾನು ಪ್ರೊಪೋಸ್ ಮಾಡಿದಾಗ ಖುರಾನಿನಲ್ಲಿ ಪ್ರೀತ್ಸೋಕೆ ಅವಕಾಶ ಇಲ್ಲ ಅಂತ ಹೇಳಿ, ಇನ್ನೊಬ್ಬನ ಹಿಂದೆ ಸುತ್ತುತ್ತಿದ್ದಾಳಲ್ಲಾ, ಯಾಕೆ?*
ಅವನು ನಿಮ್ಮಂತೆ ಧರ್ಮಗ್ರಂಥ ಓದುವ ಬದಲು ಉಮರ್ ಖಯ್ಯಾಮನ ಕವನ ಓದಿದನಂತೆ!

ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ
*ಪ್ರೇಯಸಿಯ ಮುಖವನ್ನು ಚಂದಿರನಿಗೆ, ಹೆಂಡತಿಯ ಮುಖವನ್ನು ಕಂದರಕ್ಕೆ ಹೋಲಿಸುವುದೇಕೆ?*
ಸರಿಯೇ! ಆ ಮುಖ ಹದಿನೈದು ದಿನ ಸಿಕ್ಕರೆ ಹದಿನೈದು ದಿನ ಸಿಗಲ್ಲ; ಇದು ಪರ್ಮನೆಂಟಾಗಿ ಹಳ್ಳಕ್ಕೆ ಬೀಳಿಸಿಕೊಂಡ ಮುಖ!

ಯು.ಕೃಷ್ಣಪ್ರಸಾದ್, ರಾಜಾಜಿನಗರ
*ಹೆಂಡತಿಗೆ ಸಹಾಯ ಮಾಡಿದರೆ ಎಲ್ಲಾ ಕೆಲಸವನ್ನೂ ನನ್ನ ಮೇಲೇ ತಳ್ಳುವಳಲ್ಲಾ, ಏನು ಉಪಾಯ ಮಾಡಲಿ ರಾಂಜಿ?*
ಏನು? ನಿಮ್ಮ ಹೆಂಡತಿಗೆ ನೀವೇ ಸಹಾಯ ಮಾಡುವಿರಾ? ಅಯ್ಯಯ್ಯೋ... ಮೊದಲು ಹೋಗಿ ಮನೋವೈದ್ಯರನ್ನು ಕಾಣಿ!

## ಬಹುಮಾನಿತ ಪ್ರಶ್ನೆ

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ಮರೆಯುವುದಕ್ಕೂ, ಮೈಮರೆಯುವುದಕ್ಕೂ ವ್ಯತ್ಯಾಸವೇನು?*
ಇಂದಿನ ಮತ್ತು ಅಂದಿನ ಕನ್ನಡ ಚಿತ್ರಗೀತೆಗಳಿಗೆ ಇರುವಂತಹದ್ದೇ; ಇಂದಿನವು ಮರೆಯುವಂತಹವು, ಅವು ಮೈಮರೆಯುವಂತಹವು!

ವಿ.ಎಸ್. ಹಿಂದೂಪುರ, ಬಳ್ಳಾರಿ
*ಸಾಲ-ಗೀಲ ಇವುಗಳ ವ್ಯತ್ಯಾಸ?*
ಬಟ್ಟೆ– ಗಿಟ್ಟೆ ತೆಗೆದುಕೊಳ್ಳುವಾಗ ಬಟ್ಟೆಗೆ ಮಾಡಿದ್ದು ಸಾಲ, ಗಿಟ್ಟೆಗೆ ಮಾಡಿದ್ದು ಗೀಲ!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಉದರನಿಮಿತ್ತಂ ಬಹುಕೃತವೇಷಂ; ಅಧಿಕಾರ ನಿಮಿತ್ತಂ...?*
ಬಹು ಕೃತಕ ವೇಷಂ!

ಎಸ್.ಜಿ. ಕರನಂದಿ, ಹುನಗುಂದ
*ಮಂಚಕ್ಕೆ ನಾಲ್ಕು ಕಾಲು; ಲಂಚಕ್ಕೆ?*
ಲಂಚವೇ ಮಂಚ; ನ್ಯಾಯಾಂಗ, ಶಾಸಕಾಂಗ, ಮಾಧ್ಯಮಾಂಗ, ಜನಾಂಗಗಳೇ ಅದರ ಕಾಲುಗಳು!

ಪಿ.ಜೆ.ರಾಘವೇಂದ್ರ, ಮೈಸೂರು
*ದ್ರೌಪದಿ ಪಾಂಡವರ ಬದಲು ಕೌರವರನ್ನು ಮದುವೆಯಾಗಿದ್ದಿದ್ದರೆ...?*



ನೂರು ತಾಳಿಗಳ ಭಾರಕ್ಕೆ ಕುಸಿದು ಬೀಳುತ್ತಿದ್ದಳು!

ಎಚ್.ಆರ್. ದೇಸಾಯಿ, ರಾಯಚೂರು
*ನಮ್ಮ ಪೂರ್ವಜರು ನಡೆದುಬಂದ ಹೆಜ್ಜೆಯ ಗುರುತುಗಳನ್ನು ನಾವು ನಾಶ ಮಾಡುತ್ತಿರುವುದು ಸರಿಯೆ?*
ಸದಾಚಾರದ ಹೆಜ್ಜೆಗಳು ಇರಲಿ, ಕಂದಾಚಾರದ ಹೆಜ್ಜೆಗಳಿಗೆ ವಿವೇಕದ ಕಾಂಕ್ರೀಟ್ ಹಾಕಿ ಮುಚ್ಚಿ!

ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ
*ರಾಮಾಯಣದ ವಿಭೀಷಣನ ಬಗ್ಗೆ ಈ ರಾಮ್‌ನ ಅಭಿಪ್ರಾಯವೇನು?*
ಗೆಲ್ಲುವ ಪಕ್ಷ ಯಾವುದೆಂದು ಮೊದಲೇ ಅರಿತು ಅತ್ತ ಹಾರಿದ ಪ್ರಪಂಚದ ಮೊಟ್ಟಮೊದಲ ಪಕ್ಷಾಂತರಿ!

■ ರಾಮ್